# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಸಂ: LP.No. Ad.Com/WST/0815/17-18

ಸಹಾಯಕ ನಿರ್ದೇಶಕರವರ ಕಛೇರಿ,
ನಗರ ಯೋಜನೆ (ಪಶ್ಚಿಮ),
ಬಾಷ್ಯಂ ಪಾರ್ಕ್, ಮಲ್ಲೇಶ್ವರಂ,
ಬೆಂಗಳೂರು, ದಿನಾಂಕ: 31/12/2019

ಅನುಸೂಚಿ-(VII)
(ಉಪವಿಧಿ ಸಂಖ್ಯೆ: 5.3)
"ಪ್ರಾರಂಭಿಕ ಪ್ರಮಾಣ ಪತ್ರ"

ವಿಷಯ:- ಸ್ವತ್ತಿನ ಸಂಖ್ಯೆ: 1, ಎಂ.ಎಸ್.ಆರ್.ಇ ಕಾಲೇಜ್ ರಸ್ತೆ, ಮತ್ತಿಕೆರೆ ಬೆಂಗಳೂರು, ವಾರ್ಡ್ ಸಂಖ್ಯೆ:38 (ಹಳೇ ಸಂಖ್ಯೆ:4) ಇಲ್ಲಿ ನಿರ್ಮಿಸಲಾಗುತ್ತಿರುವ "Residential Apartment" ಕಟ್ಟಡಕ್ಕೆ 'ಪ್ರಾರಂಭಿಕ ಪ್ರಮಾಣ ಪತ್ರ' ನೀಡುವ ಬಗ್ಗೆ.

ಉಲ್ಲೇಖ:- 1) ನಕ್ಷೆ ಮಂಜೂರಾತಿ ಸಂಖ್ಯೆ: Ad.Com/WST/0815/17-18, Date:23/11/2018.
2) ಅರ್ಜಿದಾರರ ಮನವಿ ದಿನಾಂಕ: 12/11/2019.

******

ಸ್ವತ್ತಿನ ಸಂಖ್ಯೆ: 1, ಎಂ.ಎಸ್.ಆರ್.ಇ ಕಾಲೇಜ್ ರಸ್ತೆ, ಮತ್ತಿಕೆರೆ ಬೆಂಗಳೂರು, ವಾರ್ಡ್ ಸಂಖ್ಯೆ:38 (ಹಳೇ ಸಂಖ್ಯೆ:4) ಇಲ್ಲಿ ನಿರ್ಮಿಸುತ್ತಿರುವ ತಳ+ನೆಲ+ಮೊದಲನೇ+ಎರಡನೇ+ಮೂರನೇ ಮತ್ತು ಟೆರೆಸ್ ಮಹಡಿಯ "Residential Apartment" 'ಕಟ್ಟಡಕ್ಕೆ ಈ ಕಛೇರಿಯಿಂದ ಎಲ್.ಪಿ.ಸಂಖ್ಯೆ: Ad.Com/WST/0815/17-18, ದಿನಾಂಕ:23/11/2018 ರಂದು ನಕ್ಷೆ ಮಂಜೂರಾತಿ ನೀಡಲಾಗಿತ್ತು. ಉಲ್ಲೇಖ(2) ರಲ್ಲಿನ ಅರ್ಜಿದಾರರ ಮನವಿಯ ಮೇರೆಗೆ "Residential Apartment" ಕಟ್ಟಡದ ಪ್ರಾರಂಭಿಕ ಪ್ರಮಾಣ ಪತ್ರ ನೀಡುವ ಸಲುವಾಗಿ ದಿನಾಂಕ: 05/12/2019 ರಂದು ಸ್ವತ್ತಿನ ಸ್ಥಳವನ್ನು ಪರಿಶೀಲಿಸಿದ್ದು, ಅರ್ಜಿದಾರರು ವಲಯ ನಿಯಮಾವಳಿಯಂತೆ, ಅಗತ್ಯ ಬಿಡುಜಾಗಗಳನ್ನು ಬಿಟ್ಟು ಆರ್.ಸಿ.ಸಿ. ಕಂಬಗಳನ್ನು ಅಳವಡಿಸಿರುತ್ತಾರೆ. ಮುಂದುವರೆದು ಸದರಿ ಸ್ವತ್ತಿಗೆ ಪ್ರಾರಂಭಿಕ ಪ್ರಮಾಣ ಪತ್ರಕ್ಕೆ ಅಗತ್ಯ ಶುಲ್ಕವಾದ ರೂ.3,56,000/- (D.D.No:622368, Dt:26/12/2019, Oriental Bank of Commerce, Sadashivanagara Baranch, Rs.3,56,000/-) ಗಳನ್ನು ಅರ್ಜಿದಾರರು ಪಾವತಿಸಿದ್ದು, ಸದರಿ ಮೊತ್ತದ ಡಿ.ಡಿ.ಯ ರಸೀತಿ ಸಂಖ್ಯೆRE-ifms210—TP/000035, ದಿನಾಂಕ:31/12/2019 ರಂದು ಸಂದಾಯಿಸಿಕೊಳ್ಳಲಾಗಿದೆ. "Residential Apartment"ಕಟ್ಟಡಕ್ಕೆ ಪ್ರಾರಂಭಿಕ ಪ್ರಮಾಣ ಪತ್ರವನ್ನು ಈ ಕೆಳಕಂಡ ಷರತ್ತುಗೊಳಪಡಿಸಿ ನೀಡಲಾಗಿದೆ.

1. ಕಟ್ಟಡ ಕಾಮಗಾರಿಯನ್ನು ಮಂಜೂರಾತಿ ನಕ್ಷೆಯಂತೆ ನಿಯಮಾನುಸಾರ ನಿರ್ಮಿಸತಕ್ಕದ್ದು. ಉದ್ದೇಶಿತ ಕಟ್ಟಡದಲ್ಲಿ ವಲಯ ನಿಯಮಾವಳಿಯ ಪರಿಮಿತಿಯೊಳಗೆ ಯಾವುದೇ ಬದಲಾವಣೆ ಮಾಡಲು ಉದ್ದೇಶಿಸಿದ್ದಲ್ಲಿ, ನಿಗದಿತ ಅವಧಿಯೊಳಗೆ ಅಗತ್ಯ ನಕ್ಷೆಗೆ ಮಂಜೂರಾತಿ ಪಡೆದು ನಂತರ ಕಾಮಗಾರಿಯನ್ನು ಮುಂದುವರೆಸುವುದು.
2. ಕಟ್ಟಡ ನಿರ್ಮಾಣದ ಪ್ರಗತಿಯನ್ನು ಕಾಲಾನುಸಾರ ಸಂಬಂಧಪಟ್ಟ ಕಛೇರಿಗೆ ಮಾಹಿತಿಯನ್ನು ನೀಡಿ, ಮಂಜೂರಾತಿ ನಕ್ಷೆಯಂತೆ ನಿರ್ಮಿಸುತ್ತಿರುವ ಬಗ್ಗೆ ಪರಿವೀಕ್ಷಣೆಗೆ ಒಳಪಡಿಸತಕ್ಕದ್ದು.
3. ಕಟ್ಟಡದಲ್ಲಿ ಮಂಜೂರಾತಿ ನಕ್ಷೆಯಂತೆ, ಅಗತ್ಯ ಸಂಖ್ಯೆಯ ವಾಹನ ನಿಲ್ದಾಣಕ್ಕೆ ಸ್ಥಳಾವಕಾಶವನ್ನು ಕಾಯ್ದಿರಿಸುವುದು.
4. ಕಟ್ಟಡ ನಿರ್ಮಾಣದ ಸ್ಥಳದಲ್ಲಿ ಅಕ್ಕ-ಪಕ್ಕದವರಿಗೆ ತೊಂದರೆಯಾಗದಂತೆ, ಕೆಲಸಗಾರರಿಗಾಗಿ ತಾತ್ಕಾಲಿಕ ಶೌಚಾಲಯವನ್ನು ನಿರ್ಮಿಸತಕ್ಕದ್ದು.
5. ಕಟ್ಟಡ ಕಾಮಗಾರಿ ಸ್ಥಳದಲ್ಲಿ ಮಂಜೂರಾತಿ ನಕ್ಷೆಯನ್ನು ಪ್ರದರ್ಶಿಸತಕ್ಕದ್ದು.

31/12/2019

ಸಹಾಯಕ ನಿರ್ದೇಶಕರು,
ನಗರ ಯೋಜನೆ (ಪಶ್ಚಿಮ),
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

ಇವರಿಗೆ:-

ಮೆ॥ ಎ & ಜಿ. ಎಂಟರ್‌ಪ್ರೈಸಸ್, (ಶ್ರೀ. ಎಂ.ಆರ್. ರಾಮಯ್ಯ)
ನಂ.1, ಎಂ.ಎಸ್.ಆರ್.ಇ ಕಾಲೇಜ್ ರಸ್ತೆ, ಮತ್ತಿಕೆರೆ
ಬೆಂಗಳೂರು, ವಾರ್ಡ್ ಸಂಖ್ಯೆ38.

ಪ್ರತಿಯನ್ನು:- ಕಾರ್ಯಪಾಲಕ ಅಭಿಯಂತರರು (ಮಲ್ಲೇಶ್ವರಂ)/ಸಹಾಯಕ ಕಾರ್ಯನಿರ್ವಾಹಕ ಅಭಿಯಂತರರು (ಮತ್ತಿಕೆರೆ) ರವರಿಗೆ ಮಾಹಿತಿಗಾಗಿ ಮತ್ತು ಕ್ರಮಕ್ಕಾಗಿ.

Balaji.G

Scanned with CamScanner